ಸಮಾಚಾರ ಸಣ್ಣದಲ್ಲ

ಜೆಡಿಎಸ್ ಮುಗಿಸಲು ಯಾರಿಂದಲೂ ಆಗಲ್ಲ

ಬೆಂಗಳೂರು: ಜೆಡಿಎಸ್ ಪಕ್ಷವನ್ನು ಮುಗಿಸಲು ಯಾರಿಗೂ ಸಾಧ್ಯವಿಲ್ಲ. ಜೆಡಿಎಸ್ ಪಕ್ಷ ಹಡಗಲ್ಲ, ಸಬ್‌ಮೆರಿನ್. ಯಾವಾಗ ಬೇಕಾದರೂ ಮೇಲಕ್ಕೆ ಏಳುತ್ತದೆ ಎಂದು ಮಾಜಿ ಸಚಿವ ಎಚ್.ಡಿ.ರೇವಣ್ಣ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಲಬುರಗಿ ಮಹಾನಗರ ಪಾಲಿಕೆಯ ಮೈತ್ರಿ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರದ ಮಾಜಿ ಸಚಿವ ಮಲ್ಲಿಕಾರ್ಜುನ ಖರ್ಗೆ ಅವರು ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡರೊಂದಿಗೆ ಮಾತನಾಡಿದ್ದಾರೆ. ಇನ್ನೂ ಅಂತಿಮ ತೀರ್ಮಾನವಾಗಿಲ್ಲ ಎಂದರು. ನಂಜನಗೂಡು ದೇವಾಲಯಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಸುಪ್ರೀಂ ಕೋರ್ಟ್ ಆದೇಶ ಪಾಲಿಸಬಾರದು ಎಂದಲ್ಲ, ದೇಗುಲ ಕೆಡಹುವುದು ಮುಖ್ಯವಲ್ಲ, ಅಭಿವೃದ್ಧಿ ಮುಖ್ಯ. ಯಾವುದೇ ದೇವಾಲಯವಿದ್ದರೂ ಅಭಿವೃದ್ಧಿ ಮಾಡಬೇಕು ಎಂದರು. ಬಿಜೆಪಿಯವರು ಬೆಳಗಾದರೆ ಹಿಂದೂ ಧರ್ಮ ಎನ್ನುತ್ತಾರೆ. ಅವರು ಧರ್ಮ ನೋಡಿಕೊಳ್ಳುವುದು ಇದೇನಾ ಎಂದ ಅವರು, ಇದು ರಾತ್ರೋರಾತ್ರಿ ಕಟ್ಟಿದ ದೇವಾಲಯವಲ್ಲ ಎಂದು ಹೇಳಿದರು.

ಮುಖಂಡರ ಸಭೆ ಕರೆಯಿರಿ

ಬೆಂಗಳೂರು: ಮೈಸೂರಿನಲ್ಲಿ ಧಾರ್ಮಿಕ ಮಂದಿರಗಳನ್ನು ತೆರವುಗೊಳಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಶಾಸಕರು ಹಾಗೂ ಧಾರ್ಮಿಕ ಮುಖಂಡರನ್ನೊಳಗೊಂಡ ಸಭೆ ಕರೆಯಬೇಕೆಂದು ಮಾಜಿ ಸಚಿವ ಸಾ.ರಾ.ಮಹೇಶ್ ಸರಕಾರವನ್ನು ಒತ್ತಾಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿಸಿ, ಪೊಲೀಸ್ ಆಯುಕ್ತರು, ಎಸ್‌ಪಿ ಅವರನ್ನೊಳಗೊಂಡಂತೆ ಧಾರ್ಮಿಕ ಮುಖಂಡರ ಸಭೆ ಕರೆದು ತೀರ್ಮಾನ ಮಾಡಬೇಕು. ಧಾರ್ಮಿಕ ವಿಚಾರವಾಗಿರುವುದರಿಂದ ಕಾನೂನಾತ್ಮಕ ವಾಗಿ ಚರ್ಚಿಸಬೇಕು. ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಮ್ಮತದ ತೀರ್ಮಾನ ಮಾಡಿಬೇಕು. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರ ಜತೆ ಮಾತನಾಡಿದ್ದೇನೆ ಎಂದರು. ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಪ್ರಾರ್ಥನಾ ಮಂದಿರವನ್ನು ತೆರವುಗೊಳಿಸಲಾಗಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಡಬಲ್ ಎಂಜಿನ್ ಬಿಜೆಪಿ ಸರಕಾರವಿದೆ. ಕೋವಿಡ್‌ನಿಂದ ಈಗಾಗಲೇ ಜನ ನೊಂದಿದ್ದಾರೆ. ಧಾರ್ಮಿಕ ವಿಚಾರ ದಲ್ಲಿ ನೋವು ಕೊಡುವುದು ಬೇಡ ಎಂದು ಹೇಳಿದರು.

ಸಭಾಪತಿ ಪ್ಯಾನಲ್ ಪುನಾರಚನೆ

ವಿಧಾನ ಪರಿಷತ್: ಸಭಾಪತಿ, ಉಪ ಸಭಾಪತಿ ಸದನದಲ್ಲಿ ಇರದ ಸಮಯದಲ್ಲಿ ಸದನ ನಡೆಸಲು ಸಭಾಪತಿ ಪೀಠದಲ್ಲಿ ಹಿರಿಯ ಸದಸ್ಯರಿಗೆ ಅವಕಾಶ ಕಲ್ಪಿಸುವ ಸಭಾಪತಿ ಪ್ಯಾನಲ್ ಅನ್ನು ಪುನರ್ ರಚಿಸಲಾಗಿದೆ. ಕೆ.ಸಿ ಕೊಂಡಯ್ಯ, ಎಚ್. ವಿಶ್ವನಾಥ್, ಮರಿತಿಬ್ಬೇಗೌಡ, ತೇಜಸ್ವಿನಿಗೌಡ ಅವರು ಸಭಾಪತಿ, ಉಪಸಭಾಪತಿಗಳು ಇಲ್ಲದಿರುವಾಗ ಸಭಾಪತಿ ಪೀಠದಲ್ಲಿ ಕುಳಿತು ಸದನ ನಡೆಸಿಕೊಡಲಿದ್ದಾರೆ ಎಂದು ಸಭಾಪತಿಗಳು ಪ್ರಕಟಿಸಿದರು.

ಕಲಾಪ ಸಲಹಾ ಸಮಿತಿ ಪುನಾರಚನೆ: ವಿಧಾನ ಪರಿಷತ್ ಕಲಾಪ ಸಲಹಾ ಸಮಿತಿಯನ್ನು ಪುನಾರಚಿಸಲಾಗಿದೆ. ಸಭಾಪತಿಗಳ ಅಧ್ಯಕ್ಷತೆಯ ಸಮಿತಿಯಲ್ಲಿ ಉಪ ಸಭಾಪತಿ ಪ್ರಾಣೇಶ್, ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ಪ್ರತಿಪಕ್ಷ ನಾಯಕ ಎಸ್.ಆರ್ ಪಾಟೀಲ್, ಸರಕಾರಿ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ, ಪ್ರತಿಪಕ್ಷ ಸಚೇತಕ ನಾರಾಯಣ ಸ್ವಾಮಿ, ಹಿರಿಯ ಸದಸ್ಯರಾದ ಕೆ ಪ್ರತಾಪ್ ಚಂದ್ರ ಶೆಟ್ಟಿ, ಮರಿತಿಬ್ಬೇಗೌಡ, ಬಿ ಕೆ ಹರಿಪ್ರಸಾದ್, ಶಶೀಲ್ ನಮೋಶಿ ಹಾಗೂ ವಿಶೇಷ ಆಹ್ವಾನಿತರಾಗಿ ಸಿಎಂ ಬಸವರಾಜ ಬೊಮ್ಮಾಯಿ ಮತ್ತು ಕಾನೂನು ಸಚಿವ ಜೆಸಿ ಮಾಧುಸ್ವಾಮಿ ಇರಲಿದ್ದಾರೆ ಎಂದು ಸಭಾಪತಿಗಳು ಪ್ರಕಟಿಸಿದರು.

ನಿಲುವಳಿ ಸೂಚನೆ ಕಾಂಗ್ರೆಸ್ ಮನವಿ

ವಿಧಾನ ಪರಿಷತ್: ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಹೆಚ್ಚಳ ಕುರಿತು ಚರ್ಚೆ ನಡೆಸಲು ನಿಯಮ 59ರ ಅಡಿಯಲ್ಲಿ ಅವಕಾಶ ನೀಡುವಂತೆ ಪ್ರತಿಪಕ್ಷ ನಾಯಕ ಎಸ್.ಆರ್ ಪಾಟೀಲ್ ವಿಧಾನ ಪರಿಷತ್‌ನಲ್ಲಿ ನಿಲುವಳಿ ಸೂಚನೆ ಮಂಡಿಸಿದರು. ಕಲಾಪ ಆರಂಭ ಗೊಳ್ಳುತ್ತಿದ್ದಂತೆ, ಪ್ರಶ್ನೋತ್ತರ ಕಲಾಪಕ್ಕೂ ಮೊದಲೇ ಪ್ರತಿಪಕ್ಷ ನಾಯಕ ಎಸ್.ಆರ್. ಪಾಟೀಲ್. ನಿಯಮ 59ರ ಅಡಿ ನಿಲುವಳಿ ಸೂಚನೆ ಮಂಡಿಸಿದರು. ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದು ರೈತಾಪಿ ವರ್ಗದ ಜೀವನದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಕೃಷಿ ಉತ್ಪಾದನೆ ಕುಂಠಿತವಾಗಿದೆ. ಇದು ಸಾರ್ವಜನಿಕ ಮಹತ್ವದ ವಿಷಯವಾಗಿದ್ದು, ಚರ್ಚೆಗೆ ಅವಕಾಶ ಕೋರಿದರು. ನಿಲುವಳಿ ಸೂಚನೆಯನ್ನು ಅಂಗೀಕರಿಸಿದ ಸಭಾಪತಿ ಬಸವರಾಜ ಹೊರಟ್ಟಿ ನಿಯಮ 68ಕ್ಕೆ ಮಾರ್ಪಡಿಸಿ ಅವಕಾಶ ಕೊಡಲಾಗುತ್ತದೆ ಎಂದು ರೂಲಿಂಗ್ ನೀಡಿದರು.

{ ಶಿವಲಿಂಗೇಗೌಡ }

ನಂಜನಗೂಡು ಬಳಿ ದೇವಾಲಯವನ್ನು ಏಕೆ ತೆರವು ಮಾಡುತ್ತಿದ್ದಾರೆ ಗೊತ್ತಿಲ್ಲ. ಸದನದಲ್ಲಿ ಈ ವಿಚಾರದ ಚರ್ಚೆಗೆ ಬಂದರೆ ಮಾತನಾಡುತ್ತೇವೆ. ದೇವಸ್ಥಾನ ತೆರವು ಸರಿ ಎಂದು ಹೇಳುವುದಿಲ್ಲ. ಸುಪ್ರೀಂಕೋರ್ಟ್ ಆದೇಶ ಪ್ರಶ್ನಿಸಲು ಸಾಧ್ಯವಿಲ್ಲ. ಮೇಲ್ಮನವಿ ಸಲ್ಲಿಸಬಹುದಷ್ಟೇ. ಈ ವಿಚಾರದಲ್ಲಿ ಬಣ್ಣಹಚ್ಚಿಕೊಂಡು ಕುಣಿದರೆ ಏನೂ ಪ್ರಯೋಜನವಿಲ್ಲ.

ಎಲ್‌ಇಡಿ ಅಳವಡಿಸುವ ಸಂಬಂಧ ಸದನದಲ್ಲಿ ಶಾಸಕರ ಆಕ್ರೋಶ | ಶೀಘ್ರವೇ ಪರಿಹಾರ ಕಂಡುಹಿಡಿಯಲು ಮುಖ್ಯಮಂತ್ರಿ ಬೊಮ್ಮಾಯಿ ಸೂಚನೆ

ಹೊತ್ತಿ ಉರಿದ ಬೀದಿದೀಪ

ಬೆಂಗಳೂರು: ಬೀದಿ ದೀಪ ಅಳವಡಿಕೆಗೆ ಇರುವ ಸಮಸ್ಯೆಗಳ ಸಂಬಂಧ ವಿಧಾನಸಭೆಯಲ್ಲಿ ಸಾರಸ್ಯಕರ ಚರ್ಚೆ ನಡೆದಿದ್ದು, ಬಹುತೇಕ ಶಾಸಕರು ತಮಗೆ ಒಂದು ಎಲ್‌ಇಡಿ ಅಳವಡಿಕೆ ಮಾಡಿಸುವ ಸಾಮರ್ಥ್ಯವೂ ಇಲ್ಲವಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಬೀದಿ ದೀಪ ಅಳವಡಿಕೆಗೆ ಗ್ಲೋಬಲ್ ಟೆಂಡರ್ ಕರೆದಿರುವ ಸರಕಾರದ ನಿರ್ಧಾರದಿಂದ ಒಂದು ಲೈಟ್ ಅಳವಡಿಕೆಗೂ ನಾವು ವರ್ಷಗಟ್ಟಲೇ ಕಾಯಬೇಕಿದೆ. ಇದು ಶಾಸಕರಾಗಿ ನಮ್ಮೆಲ್ಲರ ಅಸಹಾಯಕತೆಯ ಪ್ರತೀಕ ಎಂದು ಗುಡುಗಿದರು. ಪ್ರಶ್ನೋತ್ತರ ಕಲಾಪದಲ್ಲಿ ದಾಸರಹಳ್ಳಿ ವ್ಯಾಪ್ತಿಯ ಸಮಸ್ಯೆ ಬಗ್ಗೆ ಪ್ರಶ್ನೆ ಮಾಡಿದ ಶಾಸಕ ಆರ್. ಮಂಜುನಾಥ್ ಅವರ ಮಾತಿಗೆ ಇಡೀ ಸದನವೇ ದನಿಗೂಡಿಸುವ ಮೂಲಕ ತಮ್ಮ ತಮ್ಮ ಕ್ಷೇತ್ರಗಳ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟರು.

ದಾಸರಹಳ್ಳಿ ಕ್ಷೇತ್ರದಲ್ಲಿ ಬೀದಿದೀಪಗಳ ಅಳವಡಿಕೆಗೆ ಗ್ಲೋಬಲ್ ಟೆಂಡರ್ ಕರೆಯಲಾಗಿದೆ. 2018ರಲ್ಲೇ ಟೆಂಡರ್ ಆಗಿದ್ದರೂ ಒಂದು ಬೀದಿ ದೀಪ ಅಳವಡಿಸಿಲ್ಲ. ಪ್ರಶ್ನೆ ಮಾಡಿದರೆ, 28 ಕ್ಷೇತ್ರಗಳ ವ್ಯಾಪ್ತಿಯಲ್ಲಿಯೂ ಮಾಡಬೇಕಿದೆ. ಹೀಗಾಗಿ ವಿಳಂಬವಾಗುತ್ತದೆ ಎನ್ನುತ್ತಾರೆ. ಇಂತಹ ನಿರ್ಧಾರಗಳಿಂದ ಕ್ಷೇತ್ರದ ಜನರಿಗೆ ಉತ್ತರ ಕೊಡುವುದು ಕಷ್ಟವಾಗುತ್ತಿದೆ ಎಂದು ಮಂಜುನಾಥ್ ತಿಳಿಸಿದರು.

ಇದಕ್ಕೆ ದನಿಗೂಡಿಸಿದ ಬೆಂಗಳೂರು ನಗರದ ಬಹುತೇಕ ಶಾಸಕರು ತಮ್ಮ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಬೀದಿ ದೀಪ ಅಳವಡಿಕೆ ಸಂಬಂಧ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಟ್ಟರು. ಇದೇ ವೇಳೆ ಮಾತನಾಡಿದ ಅನೇಕ ಶಾಸಕರು ತಮ್ಮ ಕ್ಷೇತ್ರಗಳ ವ್ಯಾಪ್ತಿಯ ನಗರಸಭೆ, ಪುರಸಭೆಗಳಲ್ಲಿಯೂ ಇದೇ ರೀತಿ ಬೀದಿ ದೀಪ ಅಳವಡಿಕೆ ಮಾಡಲು ಸಮಸ್ಯೆಯಿದೆ. ಎಲ್‌ಇಡಿ ಅಳವಡಿಕೆಗೆ ಟೆಂಡರ್ ಆಗಿದ್ದು, ಅದಕ್ಕಾಗಿಯೇ ಕಾಯಬೇಕಿದೆ. ಅಲ್ಲಿವರೆಗೆ ಬೀದಿ ದೀಪ ಅಳವಡಿಕೆ ಮಾಡಲು ಸಾಧ್ಯವಿಲ್ಲ. ಹೀಗಾಗಿ, ಅನೇಕ ಕ್ಷೇತ್ರಗಳಲ್ಲಿ ಸಮಸ್ಯೆಯಾಗುತ್ತಿದೆ ಎಂದು ಗಮನ ಸೆಳೆದರು.

ಈ ಸಮಸ್ಯೆಯನ್ನು ಬಗೆಹರಿಸಲು ಅಗತ್ಯವಿರುವ ಕಡೆಗಳಲ್ಲಿ ಬೀದಿ ದೀಪಗಳನ್ನು ಅಳವಡಿಕೆ ಮಾಡಲು ಸ್ಥಳೀಯ ಆಡಳಿತವೇ ಕ್ರಮ ತೆಗೆದುಕೊಳ್ಳಲು ಸೂಚನೆ ನೀಡಲಾಗುವುದು. ಒಟ್ಟಾರೆ, ಬೀದಿ ದೀಪ ಅಳವಡಿಕೆ ಮಾಡುವ ಕಡೆಗಳಲ್ಲಿ ಮಾತ್ರವೇ ಗ್ಲೋಬಲ್ ಟೆಂಡರ್ ಅನಿವಾರ್ಯ. ಉಳಿದ ಕಡೆ ಅಗತ್ಯತೆ ಪರಿಗಣಿಸಿ ಸ್ಥಳೀಯ ಸಂಸ್ಥೆಯ ಅನುದಾನದಲ್ಲಿ ಬೀದಿದೀಪ ಒದಗಿಸಲು ನಿರ್ದೇಶನ ನೀಡಲಾಗುವುದು ಎಂದು ಸಿಎಂ ತಿಳಿಸಿದರು. ಜತೆಗೆ, ಟೆಂಡರ್ ಪಡೆದ ಕಂಪನಿಗಳು ಆದಷ್ಟು ಬೇಗ ಬೀದಿ ದೀಪ ಅಳವಡಿಕೆಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಿದೆ. ಇಲ್ಲವಾದಲ್ಲಿ ಅಂತಹ ಕಂಪನಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ಸರಕಾರಕ್ಕೆ ಅಧಿಕಾರವಿದೆ ಎಂದು ಎಚ್ಚರಿಕೆ ನೀಡಿದರು.

ಡಿಸೆಂಬರ್ ಅಂತ್ಯಕ್ಕೆ ಪೂರ್ಣ: ಇದಕ್ಕೆ ಉತ್ತರಿಸಿದ ಸಿಎಂ ಬೊಮ್ಮಾಯಿ ಅವರು, ಬಿಬಿಎಂಪಿ ವ್ಯಾಪ್ತಿಯಲ್ಲಿ ಡಿಸೆಂಬರ್ ಅಂತ್ಯದ ವೇಳೆಗೆ 3 ಲಕ್ಷ ಎಲ್‌ಇಡಿ ಬೀದಿ ದೀಪ ಅಳವಡಿಸಲು ಸೂಚನೆ ನೀಡಲಾಗಿದೆ. ಒಂದು ವೇಳೆ ನಿಗದಿತ ಸಮಯದಲ್ಲಿ ಎಲ್‌ಇಡಿ ಬಲ್ಬ್ ಅಳವಡಿಸದಿದ್ದರೆ, ಈಗಾಗಲೇ ಆಗಿರುವ ಕರಾರನ್ನು ಮರು ಪರಿಶೀಲನೆ ಮಾಡಲಾಗುವುದು. ಕಾಲ ಮಿತಿಯಲ್ಲಿ ಮಾಡದಿದ್ದರೆ ವಾರಕ್ಕೆ ಒಂದು ಲಕ್ಷ ರು. ದಂಡ ವಿಧಿಸುವ ಕರಾರು ಸಹ ಇದೆ. ಇದನ್ನು ಜಾರಿಗೆ ತರಲಾಗುವುದು ಎಂದರು.

ಕಳೆದ 2018ರಲ್ಲಿ ಬಿಬಿಎಂಪಿ ವ್ಯಾಪ್ತಿಯ 198 ವಾರ್ಡ್‌ಗಳಲ್ಲಿ ಸಾಂಪ್ರದಾಯಿಕ ಬೀದಿ ದೀಪ ತೆಗೆದು ಎಲ್‌ಇಡಿ ಬಲ್ಬ್ ಅಳವಡಿಸುವ ಪ್ರಕ್ರಿಯೆ ಪ್ರಾರಂಭವಾದರೂ 2019ರಲ್ಲಿ ಅನುಮೋದನೆಯಾಗಿತ್ತು.

2 ವರ್ಷಗಳ ಕಾಲ ಅನುಮೋದನೆ ಗುತ್ತಿಗೆ ನೀಡುವುದರಲ್ಲೇ ಕಳೆದು ಹೋಗಿದೆ. ಹಲವು ಕಡೆ ಡಾರ್ಕ್ ಸ್ಪಾಟ್ ಸೃಷ್ಟಿಯಾಗಿದೆ. ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಶೇ.85.5ರಷ್ಟು ಗರಿಷ್ಠ ವಿದ್ಯುತ್ ಉಳಿಸುವ ಉದ್ದೇಶದಿಂದ ಶಾಪುರ್ಜಿ-ಪಲೊಂಜಿ ಕಂಪನಿ, ಎಸ್‌ಎಂಸಿ ಇನ್ಫ್ರಾಸ್ಟ್ರಕ್ಚರ್ ಪ್ರೈ.ಲಿ. ಹಾಗೂ ಸಮುದ್ರ ಎಲೆಕ್ಟ್ರಾನಿಕ್ ಸಿಸ್ಟಮ್ಸ್‌ಗೆ ವಹಿಸಲಾಗಿದೆ.

ಯೋಜನೆಯ ಒಪ್ಪಂದದ ಪ್ರಕಾರ, ಬಿಬಿಎಂಪಿ ವ್ಯಾಪ್ತಿಯಲ್ಲಿ 4 ಲಕ್ಷದ 85 ಸಾವಿರದ 286 ಬೀದಿ ದೀಪಗಳನ್ನು ಐದು ಹಂತ, 30 ತಿಂಗಳಲ್ಲಿ ಅಳವಡಿಸಬೇಕಿದೆ ಎಂದು ತಿಳಿಸಿದರು.

ದನಿಗೂಡಿಸಿದ ಶಾಸಕರು

ಬೀದಿದೀಪ ಅಳವಡಿಕೆ ಸಂಬಂಧ ಎತ್ತಿದ ಪ್ರಶ್ನೆಗೆ, ಬೆಂಗಳೂರು ನಗರ ವ್ಯಾಪ್ತಿಯ ಶಾಸಕರಾದ ಆರ್. ಮಂಜುನಾಥ್, ರಾಮಲಿಂಗಾರೆಡ್ಡಿ, ರವಿಸುಬ್ರಮಣ್ಯ, ಅರವಿಂದ ಲಿಂಬಾವಳಿ ಸೇರಿ ಅನೇಕರು ಬೆಂಬಲ ವ್ಯಕ್ತಪಡಿಸಿದರು. ಸಿ. ಎನ್.ಬಾಲಕೃಷ್ಣ, ಎಚ್.ಡಿ.ರೇವಣ್ಣ, ಪ್ರಿಯಾಂಕ ಖರ್ಗೆ, ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಅನೇಕ ಶಾಸಕರು ತಮ್ಮ ಕ್ಷೇತ್ರಗಳ ವ್ಯಾಪ್ತಿಯ ನಗರಸಭೆ, ಪುರಸಭೆಗಳಲ್ಲಿ ಬೀದಿ ದೀಪ ಅಳವಡಿಕೆ ಮಾಡುವ ಸಂಬಂಧ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು.

ದಾಸರಹಳ್ಳಿ ಕ್ಷೇತ್ರದಲ್ಲಿ ಅನೇಕ ರಸ್ತೆಗಳು ಗುಂಡಿಬಿದ್ದಿದ್ದು, ವಾಹನ ಓಡಾಟ ಕಷ್ಟವಾಗಿದೆ. ಈ ಸ್ಥಳಗಳಲ್ಲಿ ಬೀದಿ ದೀಪಗಳೂ ಇಲ್ಲದಿರುವುದರಿಂದ ಅನೇಕ ಬೈಕ್ ಸವಾರರು ಬಿದ್ದು ಗಾಯಗೊಂಡಿದ್ದಾರೆ. ಕೆಲ ಸ್ಥಳಗಳಲ್ಲಿ ಜಲಮಂಡಳಿ ಮತ್ತು ಬಿಬಿಎಂಪಿ ರಸ್ತೆಗಳನ್ನು ಅಗೆದಿದ್ದು, ಇಲ್ಲಿ ಬೀದಿ ದೀಪಗಳು ಇಲ್ಲದಿರುವುದು ಸಮಸ್ಯೆಗೆ ಮತ್ತಷ್ಟು ಕಾರಣವಾಗಿದೆ.

– **ಆರ್.ಮಂಜುನಾಥ್** ದಾಸರಹಳ್ಳಿ ಶಾಸಕ



ನಗರದ ಹೊರವಲಯದಲ್ಲಿ ನೂತನ ರಸ್ತೆಗಳ ನಿರ್ಮಾಣವಾಗುತ್ತಿದೆ. ಅಲ್ಲಿ ಬೀದಿ ದೀಪ ಅಳವಡಿಕೆಗೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಒಂದೊಂದೇ ಕ್ಷೇತ್ರದಲ್ಲಿ ಬೀದಿ ದೀಪ ಅಳವಡಿಕೆ ಮಾಡಿಕೊಂಡು ಬರುತ್ತಿದ್ದೇವೆ ಎಂದು ಕಂಪನಿ ಹೇಳುತ್ತಿದ್ದು, ಇದರಿಂದ ಉಳಿದ ಕ್ಷೇತ್ರಗಳಲ್ಲಿ ಸಮಸ್ಯೆಯಾಗುತ್ತಿದೆ.

– **ಅರವಿಂದ ಲಿಂಬಾವಳಿ** ಮಹದೇವಪುರ ಶಾಸಕ

ನಮ್ಮ ಕ್ಷೇತ್ರಗಳ ಪುರಸಭೆ ವ್ಯಾಪ್ತಿಯಲ್ಲಿಯೂ ಬೀದಿ ದೀಪ ಅಳವಡಿಕೆಗೆ ಗ್ಲೋಬಲ್ ಟೆಂಡರ್ ನೆಪವೊಡ್ಡಿ ವಿಳಂಬ ಮಾಡಲಾಗುತ್ತಿದೆ. ಇದರಿಂದ ಶಾಸಕರು ಒಂದು ಬೀದಿ ದೀಪ ಅಳವಡಿಕೆ ಮಾಡಿಸಲು ಆಗುತ್ತಿಲ್ಲ ಎಂದು ಜನರು ಆಕ್ರೋಶ ವ್ಯಕ್ತಪಡಿಸುವ ಸ್ಥಿತಿ ನಿರ್ಮಾಣವಾಗಿದೆ.

– **ಸಿ.ಎನ್.ಬಾಲಕೃಷ್ಣ** ಶ್ರವಣಬೆಳಗೊಳ ಶಾಸಕ

ಅನಾಥ ಮಕ್ಕಳು ಪರಿಚಯ ಮಾಡಿಕೊಂಡಂತಿದೆ

- ನೂತನ ಸಚಿವರಿಗೆ ಸಿ.ಎಂ. ಇಬ್ರಾಹಿಂ ಲೇವಡಿ

ವಿಧಾನಪರಿಷತ್: ಅನಾಥ ಮಕ್ಕಳು ಎದ್ದು ನಿಂತು ತಮ್ಮನ್ನು ತಾವು ಪರಿಚಯ ಮಾಡಿಕೊಂಡಂತಿದೆ ಎಂದು ಕಾಂಗ್ರೆಸ್‌ನ ಹಿರಿಯ ಸದಸ್ಯ ಸಿ.ಎಂ.ಇಬ್ರಾಹಿಂ ನೂತನ ಸಚಿವರನ್ನು ಲೇವಡಿ ಮಾಡಿದರು. ಕಲಾಪ ಆರಂಭವಾಗುತ್ತಿದ್ದಂತೆ ಸದನಕ್ಕೆ ಹಾಜರಾದ ಸಚಿವರು ತಮ್ಮ ಪರಿಚಯ ಮಾಡಿಕೊಳ್ಳುವಂತೆ ಸಭಾಪತಿ ಬಸವರಾಜ ಹೊರಟ್ಟಿ ಸೂಚಿಸಿದರು.

ಆಗ ಸಹಕಾರ ಸಚಿವ ಎಸ್. ಟಿ.ಸೋಮಶೇಖರ್ ತಮ್ಮ ಹೆಸರು ಹೇಳಿ ಪರಿಚಯ ಮಾಡಿಕೊಂಡರು, ಬೈರತಿ ಬಸವರಾಜ್, ನಾರಾಯಣ ಗೌಡ, ಬಿ.ಸಿ.ಪಾಟೀಲ್, ಮುರುಗೇಶ್ ನಿರಾಣಿ, ಎಂ.ಟಿ.ಬಿ.ನಾಗರಾಜ್ ಮತ್ತು ಹಾಲಪ್ಪ ಆಚಾರ್ ತಮ್ಮ ಪರಿಚಯ ಮಾಡಿಕೊಂಡರು. ಆಗ ಸಿ.ಎಂ.ಇಬ್ರಾಹಿಂ ಅವರು, ಸಿಎಂ ಅಥವಾ ಸಭಾ ನಾಯಕರು ನೂತನ ಸಚಿವರನ್ನು ಪರಿಚಯಿಸಬೇಕು. ಮುಖ್ಯಮಂತ್ರಿಗಳು ಬಂದಿಲ್ಲ, ಸಭಾ ನಾಯಕರು ಇಲ್ಲ. ಸಚಿವರು ಪಾಪ ತಮ್ಮಷ್ಟಕ್ಕೆ ತಾವೇ ಪರಿಚಯಿಸಿಕೊಳ್ಳುವ ಪರಿಸ್ಥಿತಿ ಬಂದಿದೆ. ಇದು ಅನಾಥ ಮಕ್ಕಳು ತಮ್ಮನ್ನು ತಾವು ಪರಿಚಯಿಸಿಕೊಂಡಂತಾಗಿದೆ ಎಂದರು.

ಪ್ರತಿಪಕ್ಷ ನಾಯಕ ಎಸ್. ಆರ್. ಪಾಟೀಲ್ ಮಾತನಾಡಿ, ಸಚಿವರ ಸ್ವಯಂ ಪರಿಚಯ ಒಳ್ಳೆಯ ಸಂಪ್ರದಾಯವಲ್ಲ ಎಂದು ಅಸಮದಾನ ವ್ಯಕ್ತಪಡಿಸಿದರು. ಹೊಸ ಸಚಿವರನ್ನು ಪರಿಚಯಿಸದಿದ್ದರೆ, ಸದನದಲ್ಲಿ ಇರುವ ಸಚಿವರು ಯಾರು ಎಂಬ ಆಕ್ಷೇಪ ವ್ಯಕ್ತ ಪಡಿಸುತ್ತೀರಾ? ಅದಕ್ಕಾಗಿ ನಾನೇ ಪರಿಚಯಿಸಿಕೊಳ್ಳಲು ಸಲಹೆ ನೀಡಿದ್ದೆ ಎಂದು ಸಭಾಪತಿ ಹೇಳಿದರು. ಒಂದು ವೇಳೆ ನಿಮಗೆ ಸಮಧಾನವಾಗದಿದ್ದರೆ ಸಭಾ ನಾಯಕರು ಬಂದ ಮೇಲೆ ಮತ್ತೊಮ್ಮೆ ಪರಿಚಯ ಮಾಡಿಕೊಡುತ್ತೇವೆ ಎಂದು ಹೇಳಿದರು.

ಮೈಸೂರು ಲ್ಯಾಂಪ್ಸ್ ಭೂಮಿ ಮಾರಾಟ ಮಾಡುತ್ತಿಲ್ಲ

ವಿಧಾನ ಪರಿಷತ್: ಯಶವಂತಪುರದಲ್ಲಿರುವ ಮೈಸೂರು ಲ್ಯಾಂಪ್ಸ್ ಕಾರ್ಖಾನೆಯ ಭೂಮಿಯನ್ನು ಅಭಿವೃದ್ಧಿ ಪಡಿಸಲು ಬೆಂಗಳೂರು ಪಾರಂಪರಿಕ ಟ್ರಸ್ಟ್ ಹೆಸರಿನಲ್ಲಿ ನೋಂದಣಿ ಮಾಡಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಹೇಳಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಸದಸ್ಯ ಕಾಂತರಾಜು ಅವರು ಕೇಳಿದ ಪ್ರಶ್ನೆಗೆ ಪ್ರತಿಪಕ್ಷದ ನಾಯಕ ಎಸ್.ಆರ್. ಪಾಟೀಲ್ ಧ್ವನಿಗೂಡಿಸಿದರು. ಸರಕಾರ ಮೈಸೂರು ಲ್ಯಾಂಪ್ಸ್ ಭೂಮಿಯನ್ನು ಮಾರಾಟ ಮಾಡುತ್ತಿಲ್ಲ, ಮಾರಾಟ ಮಾಡುವ ಉದ್ದೇಶವೂ ಇಲ್ಲ.

ಆ ಭೂಮಿಯಲ್ಲಿ ನಾಡಿನ ಕಲೆ, ಸಂಸ್ಕೃತಿ ಹಾಗೂ ವೈವಿಧ್ಯತೆಗಳ ಮಾಹಿತಿ ನೀಡುವ ಚಟುವಟಿಕೆ ಕೇಂದ್ರವನ್ನಾಗಿಸುವ ಉದ್ದೇಶವಿದೆ. ಈ ಚಟುವಟಿಕೆಗಾಗಿ ಸರಕಾರ ಮುಖ್ಯಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಟ್ರಸ್ಟ್ ರಚಿಸಲಾಗಿದೆ. ಸಮಿತಿಯಲ್ಲಿ ಏಳು ಮಂದಿ ಐಎಎಸ್ ಅಧಿಕಾರಿಗಳು ಹಾಗೂ ಐದು ಮಂದಿ ಹೊರಗಿನವರು ಸದಸ್ಯರಾಗಿದ್ದಾರೆ ಎಂದರು. ಟ್ರಸ್ಟ್ ರಚನೆ ಮಾಡಿರುವುದರಿಂದ ಆ ಭೂಮಿ ದುರುಪಯೋಗವಾಗುವ ಸಾಧ್ಯತೆ ಇದೆ. ಟ್ರಸ್ಟ್‌ನವರು ಕಟ್ಟಡ ನಿರ್ಮಿಸಿ ಬಾಡಿಗೆ ಕೊಡುತ್ತಾರೆ. ಟ್ರಸ್ಟ್‌ನಲ್ಲಿ ಸದಸ್ಯರು ಯಾರು, ಅಂಬಾನಿ, ಅದಾನಿಯವರಂತ ಶ್ರೀಮಂತರೆ ಎಂದು ಕಾಂತರಾಜು ಪ್ರಶ್ನಿಸಿದರು.

ಇದಕ್ಕೆ ಬೆಂಬಲ ವ್ಯಕ್ತಪಡಿಸಿದ ಎಸ್. ಆರ್.ಪಾಟೀಲ್, ಈ ಜಾಗ ಮೈಸೂರು ಮಹಾರಾಜರು ನೀಡಿದ್ದು, ಈಗ ರಚನೆಯಾಗಿರುವ ಟ್ರಸ್ಟ್ ಮುಂದೆ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬ ನೆಪವೊಡ್ಡಿ ಜಾಗವನ್ನು ಖಾಸಗಿಯವರಿಗೆ ಒಪ್ಪಿಸಿ ಬಿಡುವ ಆತಂಕವಿದೆ ಎಂದರು

ಚರ್ಚೆಗೆ ಅವಕಾಶ

ಆ ಪ್ರದೇಶದ ಅಭಿವೃದ್ಧಿಗೆ ಸಮಗ್ರ ಯೋಜನೆ ಮತ್ತು ರೂಪುರೇಷೆ ತಯಾರಿಸಲಾಗುತ್ತಿದೆ. ಅದು ಪೂರ್ಣಗೊಂಡ ಬಳಿಕ ಸದಸ್ಯರು ಅಗತ್ಯ ಸಲಹೆ ಸೂಚನೆ ನೀಡಬಹುದು ಎಂದು ಸಚಿವರು ಸಲಹೆ ನೀಡಿದರು. ಇದು ಗಂಭೀರವಾದ ವಿಷಯವಾಗಿದ್ದು, ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡುವಂತೆ ಎಸ್.ಆರ್.ಪಾಟೀಲ್ ಮನವಿ ಮಾಡಿದಾಗ, ಅದಕ್ಕೆ ಸ್ಪಂದಿಸಿದ ಸಭಾಪತಿ ಬಸವರಾಜ ಹೊರಟ್ಟಿ ಅವರು ಅರ್ಧಗಂಟೆ ಕಾಲ ಚರ್ಚೆಗೆ ಅವಕಾಶ ನೀಡುವ ಭರವಸೆ ನೀಡಿದರು.

ತಜ್ಞರು ಒಪ್ಪಿದರೆ 1ರಿಂದ 5ನೇ ತರಗತಿಗಳು ಆರಂಭ

- ಒಂದರಿಂದ ಐದನೇ ತರಗತಿ ಪುನರಾರಂಭ ಸುಳಿವು

ಬೆಂಗಳೂರು: ತಜ್ಞರು ಒಪ್ಪಿಗೆ ನೀಡಿದರೆ ರಾಜ್ಯದಲ್ಲಿ 1 ರಿಂದ 5ನೇ ತರಗತಿ ಪುನಾರಂಭ ಮಾಡಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ ನಾಗೇಶ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ 1 ರಿಂದ 5ನೇ ತರಗತಿ ಶಾಲೆ ಆರಂಭಕ್ಕೆ ತಯಾರಿ ಮಾಡಿಕೊಂಡಿದ್ದೇವೆ. ಮಕ್ಕಳು ಹೇಗೆ ನಿಯಮ ಪಾಲಿಸುತ್ತಾರೆ ಎನ್ನುವುದರ ಬಗ್ಗೆ ಆತಂಕವಿದ್ದು ಈ ಬಗ್ಗೆ ತಜ್ಞರ ಜತೆ ನಡೆಸುವ ಚರ್ಚೆಯಲ್ಲಿ ಒಪ್ಪಿಗೆ ನೀಡಿದರೆ ಶಾಲೆ ಆರಂಭ ಮಾಡುತ್ತೇವೆ ಎಂದು ಹೇಳಿದರು.

6ರಿಂದ 8ನೇ ತರಗತಿಗಳನ್ನು ಶಿಕ್ಷಕರು ಚೆನ್ನಾಗಿ ನಡೆಸಿದ್ದಾರೆ. ಸದ್ಯದಲ್ಲೇ 1ರಿಂದ 5ರವರೆಗೆ ಶಾಲೆ ತೆರೆಯುವ ಬಗ್ಗೆ ತಾಂತ್ರಿಕ ಸಮಿತಿ ಮುಂದೆ ಚರ್ಚೆ ಮಾಡುತ್ತೇವೆ. ತಾಂತ್ರಿಕ ಸಮಿತಿ ಸಭೆ ಅನುಮತಿ ನೀಡಿದ ಬಳಿಕ ಆರಂಭಿಸುತ್ತೇವೆ ಎಂದರು.

ಪಠ್ಯ ಕಡಿತಗೊಳಿಸುವ ಕುರಿತು ಬ್ರಿಡ್ಜ್ ಕೋರ್ಸ್ ಮಾಡುತ್ತಿದ್ದೇವೆ. ಪಠ್ಯ ಪೂರ್ತಿ ಮಾಡಿದರೆ ಮಕ್ಕಳಿಗೆ ಲಾಭ. ಮಕ್ಕಳು ಒಂದೂವರೆ ವರ್ಷ ಶಾಲೆಯಿಂದ ದೂರ ಉಳಿದಿದ್ದಾರೆ. ಅದನ್ನು ಬ್ರಿಡ್ಜ್ ಕೋರ್ಸ್‌ನಲ್ಲಿ ಪೂರ್ಣಗೊಳಿಸ ಬೇಕಿದೆ. ಈ ವರ್ಷವೂ ಪಠ್ಯ ಕಡಿತಗೊಳಿಸಿದರೆ ಮುಂದಿನ ತರಗತಿಗಳಿಗೆ ತೊಂದರೆಯಾಗುತ್ತದೆ. ಹೀಗಾಗಿ ಆ ಬಗ್ಗೆ ಇನ್ನು ಯಾವ ನಿರ್ಣಯ ಕೈಗೊಂಡಿಲ್ಲ ಎಂದು ಹೇಳಿದರು.

ಶಿಕ್ಷಕರ ರಜೆ ಕಡಿಮೆ ಮಾಡಿ ಸಿಲೆಬಸ್ ಪೂರ್ಣಗೊಳಿಸಬಹುದಾ ಎಂಬ ಬಗ್ಗೆ ಯೋಚನೆ ಇದೆ. ಈ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ. ಮುಂದಿನ ದಿನಗಳಲ್ಲಿ ಶಿಕ್ಷಕರ ಸಹಕಾರ ನೋಡಿ, ಅವಶ್ಯಕತೆ ಬಿದ್ದರೆ ನಿರ್ಣಯ ಕೈಗೊಳ್ಳುತ್ತೇವೆ. ಪಠ್ಯ ಕಡಿತಗೊಳಿಸುವ ಬಗ್ಗೆ ಪ್ರಯತ್ನ ಮಾಡುತ್ತೇವೆ ಎಂದರು.

ರಾಘವೇಂದ್ರ ಸಹಕಾರ ಬ್ಯಾಂಕ್ ಅವ್ಯವಹಾರ ಪ್ರಕರಣ

ಸಿಬಿಐಗೆ ವಹಿಸಲು ನಕಾರ

ವಿಧಾನ ಪರಿಷತ್: ಬಸವಗುಡಿಯ ರಾಘವೇಂದ್ರ ಸಹಕಾರ ಬ್ಯಾಂಕ್ ಅವ್ಯವಹಾರ ಪ್ರಕರಣದ ತನಿಖೆಯನ್ನು ಸಿಬಿಐಗೆ (ಕೇಂದ್ರ ತನಿಖಾ ದಳ) ವಹಿಸಲು ಸರಕಾರ ನಿರಾಕರಿಸಿದ್ದು, ತಜ್ಞರ ಸಮಿತಿ ರಚಿಸುವ ಸಂಬಂಧ ಆರ್‌ಬಿಐ ಜತೆ ಮಾತುಕತೆ ನಡೆಸುವುದಾಗಿ ಭರವಸೆ ನೀಡಿದೆ.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್, ರಾಘವೇಂದ್ರ ಸಹಕಾರಿ ಬ್ಯಾಂಕ್ ಅವ್ಯವಹಾರ ಪ್ರಕರಣದ ಬಗ್ಗೆ ಪ್ರಸ್ತಾಪಿಸಿ, ಬ್ಯಾಂಕ್‌ನಲ್ಲಿ 46 ಸಾವಿರ ಜನ ಠೇವಣಿದಾರರಿದ್ದಾರೆ. ಹತ್ತು ವರ್ಷದಿಂದ ಹಗರಣ ನಡೆಯುತ್ತಿದೆ. ಆದರೆ ಪ್ರತಿ ವರ್ಷ ಬ್ಯಾಂಕ್‌ಗೆ ಒಳ್ಳೆಯ ಪ್ರಶಸ್ತಿ ಕೊಡುತ್ತಾ ಜನರಿಗೆ ಮೋಸ ಮಾಡಲಾಗಿದೆ. ಸರಕಾರ ಬರೀ ಆಡಿಟ್ ಮಾಡುತ್ತಿದೆ. ಹಿಂದಿನ ಆಡಿಟರ್‌ಗಳ ವಿರುದ್ಧ ಯಾಕೆ ಕ್ರಮ ತೆಗೆದುಕೊಂಡಿಲ್ಲ, ಯಾಕೆ ಪ್ರಕರಣವನ್ನು ಸಿಬಿಐಗೆ ಕೊಡದೆ ಸಿಐಡಿಗೆ ಕೊಟ್ಟಿದ್ದೀರಾ? ನಿಮ್ಮಲ್ಲಿ ಸಿಬ್ಬಂದಿ ಇದೆಯಾ? ಎಂದು ಪ್ರಶ್ನಿಸಿದರು.

ಈ ಕುರಿತು ಸರಕಾರ ಕೂಡಲೇ ಒಂದು ಸಮಿತಿ ಮಾಡಬೇಕು. ಹೈಕೋರ್ಟ್ ಈ ಪ್ರಕರಣದಲ್ಲಿ ಮೇಲುಸ್ತುವಾರಿ ಮಾಡುತ್ತಿದೆ ಅಂತ ನಾವು ಜನರಿಗೆ ಕೋರ್ಟ್‌ಗೆ ಹೋಗಿ ಎನ್ನಬೇಕಾ? ನಮ್ಮ ಕೇಂದ್ರ ಹಣಕಾಸು ಸಚಿವರು ನಮ್ಮನ್ನು ಕೇಳಿ ಹಣ ಇಟ್ಟಿದ್ದೀರಾ ಎನ್ನುತ್ತಾರೆ. ಹೀಗಿದ್ದಾಗ ನಾವೇನು ಮಾಡಬೇಕು? ಜನರಿಗೆ ನಾವು ಏನು ಹೇಳಬೇಕು? ಅಕ್ರಮದ ಫಲಾನುಭವಿಗಳು ಯಾರು ಎಂದು ಸರಕಾರಕ್ಕೆ ಗೊತ್ತಿಲ್ಲವೇ? ಸಿಎಗಳನ್ನು ಯಾಕೆ ಬಂಧಿಸಿಲ್ಲ? ಕೂಡಲೇ ಸರಕಾರ ತಜ್ಞರ ಸಮಿತಿ ರಚಿಸಬೇಕು. ಇಲ್ಲವೇ ಪ್ರಕರಣವನ್ನು ಸಿಬಿಐಗೆ ಕೊಡಬೇಕು ಇಲ್ಲದೇ ಇದ್ದಲ್ಲಿ ಸದನದ ಬಾವಿಗಿಳಿದು ಧರಣಿ ನಡೆಸುತ್ತೇನೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಪಕ್ಷ ನಾಯಕ ಎಸ್.ಆರ್.ಪಾಟೀಲ್ ಮಾತನಾಡಿ, ಬ್ಯಾಂಕಿನ ಅಧ್ಯಕ್ಷ, ಉಪಾಧ್ಯಕ್ಷ, ನಿರ್ದೇಶಕರೇ ಸಾಲ ಪಡೆದುಕೊಂಡಿದ್ದಾರೆ. ಆದರೆ ಆರ್‌ಬಿಐ ನಿಯಮದ ಪ್ರಕಾರ ಅಧ್ಯಕ್ಷರಲ್ಲ ಅವರ ಸಂಬಂಧಿಕರಿಗೂ ಸಾಲ ಕೊಡುವಂತಿಲ್ಲ. ಆದರೆ ಇಲ್ಲಿ ಸಾಲ ಕೊಡಲಾಗಿದೆ. ಸಾಲದ ಖಾತೆಗಳಿಗೆ ದಾಖಲೆಯೇ ಇಲ್ಲ. ಸಾಲದ ಅರ್ಜಿಯಿಲ್ಲ, ಆಸ್ತಿ ಅಡಮಾನ ಇಲ್ಲ. 2 ಸಾವಿರ ಕೋಟಿ ರು. ಅವ್ಯವಹಾರ ನಡೆದಿದೆ ಎಂದರು. ಹಿಂದೆ ನಮ್ಮ ಸರಕಾರ ಇದ್ದಾಗ ಶಿವಮೊಗ್ಗ ಡಿಸಿಸಿ ಬ್ಯಾಂಕ್ ಅವ್ಯವಹಾರ ನಡೆದಾಗ ಅಧ್ಯಕ್ಷರನ್ನೇ ಬಂಧಿಸ ಲಾಗಿತ್ತು. ಹಾಗಾಗಿ ಈಗ ಸೂಕ್ತ ಕ್ರಮ ಕೈಗೊಳ್ಳಬೇಕು. ಬರೀ ಕೋರ್ಟ್‌ಗೆ ಹೋದರೆ ಠೇವಣಿದಾರರು ಏನು ಮಾಡಬೇಕು. ಗೆದ್ದವನು ಸೋತ, ಸೋತವನು ಸತ್ತ ಅನ್ನುವಂತಾಗಲಿದೆ. ಹಾಗಾಗಿ ಕಾರಣರಾದವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿ ಜೈಲಿಗೆ ತಳ್ಳಿ. ಸಿಐಡಿ ಬಗ್ಗೆ ನಮಗೆ ಗೌರವವಿದೆ. ಆದರೆ ಸಾವಿರಾರು ಹಣ ಅವ್ಯವಹಾರ ಇದೆ. ಸಿಐಡಿಗೂ ಆಮಿಷ ಒಡ್ಡಬಹುದು ಹಾಗಾಗಿ ಸಿಬಿಐಗೆ ವಹಿಸಿ ಎಂದು ಆಗ್ರಹಿಸಿದರು.

ಸರಕಾರವೇ ಶಾಮೀಲಾಗಿರುವ ಅನುಮಾನ

ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ವಂಚನೆ ಪ್ರಕರಣ ವಿಚಾರವನ್ನು ಯು.ಬಿ. ವೆಂಕಟೇಶ್ ವಿಧಾನ ಪರಿಷತ್‌ನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ವೇಳೆ ಅವರು ಈ ಪ್ರಕರಣದಲ್ಲಿ ಸರಕಾರವೇ ಶಾಮೀಲಾಗಿದೆ ಅನ್ನೋ ಅನುಮಾನ ಮೂಡ್ತಿದೆ ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ. ಗುರು ರಾಘವೇಂದ್ರ ಬ್ಯಾಂಕ್ ಆಡಿಟ್ ವಿಳಂಬ ಮಾಡಲಾಗ್ತಿದೆ. ಇನ್ನೂ ಯಾಕೆ ಬ್ಯಾಂಕ್ ವಂಚನೆಯಲ್ಲಿ ಭಾಗಿಯಾದವರ ವಿರುದ್ಧ ಕ್ರಮ ಕೈಗೊಂಡಿಲ್ಲ. ಸರಕಾರವೇ ಇವರೊಂದಿಗೆ ಶಾಮೀಲಾಗಿದ್ದಾರೆ ಎನ್ನೋ ಅನುಮಾನ ಮೂಡುತ್ತಿದೆ ಎಂದರು.

ಕಲಾಪ ವಿಸ್ತರಣೆಗೆ ಒಪ್ಪದ ಸರಕಾರ

- ಪ್ರತಿಪಕ್ಷಗಳ ಒತ್ತಡಕ್ಕೆ ಮಣಿಯದ ಸರಕಾರ
- ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಒತ್ತಾಯಿಸಿದ್ದ ಪ್ರತಿಪಕ್ಷ

ಬೆಂಗಳೂರು: 10 ದಿನಗಳ ನಿಗದಿಯಾಗಿದ್ದ ವಿಧಾನಮಂಡಲ ಅಧಿವೇಶನವನ್ನು ವಿಸ್ತರಿಸುವ ಪ್ರತಿಪಕ್ಷಗಳ ಒತ್ತಡಕ್ಕೆ ಸರಕಾರ ಮಣಿಯದೇ, ನಿಗದಿಯಂತೆ ಸೆ.23ಕ್ಕೆ ಮುಕ್ತಾಯಗೊಳಿಸಲು ತೀರ್ಮಾನಿಸಲಾಗಿದೆ.

ವಿಧಾನಮಂಡಲದ ಅಧಿವೇಶನವನ್ನು ವಿಸ್ತರಿಸಲು ಸರಕಾರ ಒಪ್ಪದೇ ಇರುವುದರಿಂದ ವಿಧಾನಮಂಡಲದ ಅಧಿವೇಶನ ನಿಗದಿಯಂತೆ ಸೆಪ್ಟೆಂಬರ್ 23 ರವರೆಗೂ ನಡೆಯಲಿದೆ. ವಿಧಾನಸಭಾಧ್ಯಕ್ಷ ವಿಶ್ವೇಶ್ವರಹೆಗಡೆ ಕಾಗೇರಿ ಅವರ ನೇತೃತ್ವದಲ್ಲಿ ವಿಧಾನಸೌಧದಲ್ಲಿ ನಡೆದ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿವೇಶನವನ್ನು ಇನ್ನೂ 10 ದಿನಗಳ ಕಾಲ ವಿಸ್ತರಿಸುವಂತೆ ಬೇಡಿಕೆ ಇಟ್ಟಿತ್ತಾದರೂ ಅದಕ್ಕೆ ಸರಕಾರ ಒಪ್ಪಿಲ್ಲ.

ಹಲವು ವಿಚಾರಗಳನ್ನು ಪ್ರಸ್ತಾಪಿಸಬೇಕಿದೆ. ಅಧಿವೇಶನ ವಿಸ್ತರಿಸಿ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರಾದರೂ ಅದಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ಸಮ್ಮತಿ ವ್ಯಕ್ತಪಡಿಸಲಿಲ್ಲ ಎನ್ನಲಾಗಿದೆ. ನಿಯಮಾವಳಿಗಳಂತೆ ಸದನ ನಡೆಸಿದರೆ ನಮ್ಮ ಸಹಕಾರ ಇರುತ್ತದೆ. ತರಾತುರಿಯಲ್ಲಿ ವಿಧೇಯಕಗಳನ್ನು ತಂದರೆ ಅದನ್ನು ಬೆಂಬಲಿಸುವುದಿಲ್ಲ ಎಂದು ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ನಾಯಕರುಗಳು ಸಭೆಯಲ್ಲಿ ಹೇಳಿದ್ದು, ಮಂಗಳವಾರದ ಸಹ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನವಾಗದೆ ಸದನದ ಕಾರ್ಯಸೂಚಿಯಲ್ಲಿ ನಾಲ್ಕು ವಿಧೇಯಕಗಳ ಮಂಡನೆ ಇದೆ ಇದು ಸರಿಯೇ. ಈ ರೀತಿ ನಿಯಮಾವಳಿಗಳನ್ನು ಬಿಟ್ಟು ಸದನ ನಡೆಸಬೇಡಿ ಎಂದು ಸಿದ್ದರಾಮಯ್ಯ ಸಭೆಯಲ್ಲಿ ಹೇಳಿದರು ಎನ್ನಲಾಗಿದೆ.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಸಿದ್ದರಾಮಯ್ಯನವರನ್ನು ಸಮಾಧಾನಿಸಿ, ಸಿದ್ದರಾಮಣ್ಣ, ಇದೆಲ್ಲಾ ಇದ್ದದ್ದೆ ಹಿಂದೆ ಎಲ್ಲ ಆಗಿದೆ. ಎಲ್ಲವನ್ನು ಸರಿ ಮಾಡೋಣ ಬಿಡಿ ಸುಗಮ ಕಲಾಪಕ್ಕೆ ಸಹಕಾರ ನೀಡಿ ಎಂದು ಹೇಳಿ ಎಲ್ಲರನ್ನು ಸಮಾಧಾನಿಸಿದರು. ನಂತರ ಕಲಾಪ ಸಲಹಾ ಸಮಿತಿಯಲ್ಲಿ ಯಾವ ಯಾವ ವಿದೇಯಕಗಳ ಮಂಡನೆ, ಯಾವ ಯಾವ ವಿಷಯಗಳ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು ಎಂಬೆಲ್ಲಾ ಬಗ್ಗೆ ಚರ್ಚೆಗಳು ನಡೆದು, ಸುಗಮ ಕಲಾಪ ನಡೆಸುವ ಸಂಬಂಧ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

30 ಲಕ್ಷ ರೈತರಿಗೆ 20 ಸಾವಿರ ಕೋಟಿ ಸಾಲ: ಸರಕಾರದ ಹೆಗ್ಗುರಿ

ವಿಧಾನಪರಿಷತ್: ರಾಜ್ಯದ ಡಿಸಿಸಿ ಬ್ಯಾಂಕ್‌ಗಳು ಸೇರಿದಂತೆ ಎಲ್ಲ ಸಹಕಾರ ಬ್ಯಾಂಕ್‌ಗಳಿಂದ ಈ ವರ್ಷ 30 ಲಕ್ಷ ರೈತರಿಗೆ 20,810 ಕೋಟಿ ರು. ಸಾಲ ನೀಡುವ ಗುರಿ ಹೊಂದಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ವಿಧಾನಪರಿಷತ್‌ನಲ್ಲಿ ಮಂಗಳವಾರ ತಿಳಿಸಿದರು.

ಕಳೆದ ವರ್ಷ 14,500 ಕೋಟಿ ರು. ಸಾಲ ನೀಡುವ ಗುರಿ ಹೊಂದಲಾಗಿತ್ತು. ನಿಗದಿತ ಗುರಿಗಿಂತ ಹೆಚ್ಚಿನ ಸಾಲ ವಿತರಣೆ ಮಾಡಲಾಗಿದೆ. ಈ ವರ್ಷ 30 ಲಕ್ಷ ರೈತರಿಗೆ ಸಾಲ ನೀಡಿಕೆ ಪ್ರಕ್ರಿಯೆ ಆರಂಭವಾಗಿದೆ ಎಂದು ಹೇಳಿದರು. ಆಡಳಿತ ಪಕ್ಷದ ಸದಸ್ಯೆ ಭಾರತಿಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಎಲ್ಲ ಸಹಕಾರಿ ಬ್ಯಾಂಕ್‌ಗಳಿಂದ ರೈತರಿಗೆ ಸಾಲ ಸೌಲಭ್ಯ ಒದಗಿಸುವುದು ಸರಕಾರದ ಉದ್ದೇಶ ಎಂದು ಹೇಳಿದರು.

3 ಲಕ್ಷ ರು.ಗಳವರೆಗೆ ಹೈನುಗಾರಿಕೆ ಸೇರಿದಂತೆ ಅಲ್ಪಾವಧಿ ಕೃಷಿ ಸಾಲವನ್ನು ಶೂನ್ಯ ಬಡ್ಡಿದರದಲ್ಲಿ, 10 ಲಕ್ಷವರೆಗಿನ ಸಾಲಕ್ಕೆ ಶೇ. 3 ರ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತಿದೆ. ಸಾಲ ನೀಡಿಕೆ ಪ್ರಮಾಣವನ್ನು ವರ್ಷದಿಂದ ವರ್ಷಕ್ಕೆ ಹೆಚ್ಚು ಮಾಡಲಾಗುತ್ತಿದೆ ಎಂದು ಹೇಳಿದರು.

ಮಹಿಳಾ ಸ್ವಸಹಾಯ ಸಂಘಗಳಿಗೆ ಶೂನ್ಯ ಬಡ್ಡಿ ದರದಲ್ಲಿ ಹಾಗೂ ಪುರುಷ ಸ್ವಸಹಾಯ ಸಂಘಗಳಿಗೆ 5 ಲಕ್ಷ ರು. ಗಳವರೆಗೆ 4ರ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ ಎಂದರು. ಗ್ರಾಮೀಣ ಪ್ರದೇಶದ ಮಹಿಳಯರು ಮತ್ತು ನಿರುದ್ಯೋಗ ಪುರುಷರಿಗೆ ಸ್ವಯಂ ಉದ್ಯೋಗ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸರಕಾರ ಸಾಲ ಸೌಲಭ್ಯ ನೀಡಲಾಗುತ್ತಿದೆ ಎಂದರು.

ಮೈಶುಗರ್ ಸಕ್ಕರೆ ಕಾರ್ಖಾನೆ ಪುನಶ್ಚೇತನ ಕುರಿತು ಸಿಎಂ ಜತೆ ಸಭೆ: ಸಚಿವ ಮುರುಗೇಶ್ ನಿರಾಣಿ

ವಿಧಾನ ಪರಿಷತ್: ಮಂಡ್ಯ ಮೈ ಶುಗರ್ ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರಿಗೆ ಕೊಡಬೇಕೋ ಅಥವಾ ಸರಕಾರವೇ ಪುನಶ್ಚೇತನ ಮಾಡಿ ನಡೆಸಬೇಕೋ ಎನ್ನುವ ಕುರಿತು ಪ್ರಸಕ್ತ ಅಧಿವೇಶನದ ನಂತರ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ಸಚಿವ ಮುರುಗೇಶ್ ನಿರಾಣಿ ಭರವಸೆ ನೀಡಿದ್ದಾರೆ.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಜೆಡಿಎಸ್ ಸದಸ್ಯ ಮರಿತಿಬ್ಬೇಗೌಡ, ಮೈಶುಗರ್ ಖಾಸಗೀಕರಣದ ಕುರಿತು ಪ್ರಶ್ನಿಸಿದ್ದಾರೆ. ಮೈಸೂರು ಸಕ್ಕರೆ ಕಾರ್ಖಾನೆ ಮಂಡ್ಯ ಜಿಲ್ಲೆಯ ಜನರ ಬದುಕಾಗಿತ್ತು. ಇಡೀ ರಾಜ್ಯದಲ್ಲಿ ಸರಕಾರಿ ಸಾಮ್ಯದ ಕಾರ್ಖಾನೆ ನಷ್ಟದಲ್ಲಿದೆ, ರಾಜ್ಯ ಸರಕಾರಕ್ಕೆ ಲಾಭದಾಯಕ ಮಾಡಲು ಸಾಧ್ಯವಾಗಿಲ್ಲ, ಕಳೆದ ಮೂರು ವರ್ಷದಿಂದ ಸಂಪೂರ್ಣ ಸ್ಥಗಿತವಾಗಿದೆ ಎಂದರು.

ಹಿಂದೆ ಪಾಂಡವಪುರ ಸಕ್ಕರೆ ಕಾರ್ಖಾನೆ ಲೀಸ್ ಕೊಟ್ಟಿತ್ತು ಕೇವಲ 4 ವರ್ಷವೂ ನಡೆಸಲಿಲ್ಲ. ಈಗ ಮತ್ತೊಂದು ಕಂಪನಿಗೆ ಕೊಟ್ಟಿದ್ದಾರೆ. ಶ್ರೀರಾಮ ಸಕ್ಕರೆ ಕಾರ್ಖಾನೆ ಕೂಡ ಖಾಸಗಿಯವರು ಆರಂಭಿಸಲೇ ಇಲ್ಲ, ಯಂತ್ರೋಪಕರಣಗಳೇ ಕಾಣೆಯಾಗಿವೆ, ಖಾಲಿ ಕಾರ್ಖಾನೆ ಉಳಿದುಕೊಂಡಿದೆ. ಹಾಗಾಗಿ ಅಂದು ಯಡಿಯೂರಪ್ಪ ಅವರನ್ನು ಭೇಟಿ ಮಾಡಿದ್ದಾಗ ಖಾಸಗಿಯವರಿಗೆ ಕೊಡಲ್ಲ ಎಂದಿದ್ದರು. ಆದರೆ ಈಗ ಖಾಸಗಿಯವರಿಗೆ ಕೊಡಲಾಗುತ್ತದೆ ಎನ್ನುತ್ತಿರುವುದು ಸರಿಯಲ್ಲ ಎಂದು ಮರಿತಿಬ್ಬೇಗೌಡ ಹೇಳಿದರು.

ಒಡೆಯರ್ ಕಾಲದ ಕಾರ್ಖಾನೆ ಉಳಿಸಬೇಕು. ಸರಕಾರಕ್ಕೆ ಇದನ್ನ ನಡೆಸಲು ಆಗುತ್ತಿಲ್ಲ ಎನ್ನುವುದು ಜನಪ್ರತಿನಿಧಿಗಳೆಲ್ಲಾ ತಲೆ ತಗ್ಗಿಸುವ ಕೆಲಸ. ಸಿಎಂ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ತೀರ್ಮಾನ ಕೈಗೊಳ್ಳಬೇಕು ಎಂದರು.

ಪುನಶ್ಚೇತನಕ್ಕೆ 520 ಕೋಟಿ ರು.: ಕೈಗಾರಿಕಾ ಸಚಿವ ನಿರಾಣಿ ಮಾತನಾಡಿ, ಮೈಶುಗರ್ ಏಷ್ಯಾದ ಮೊದಲ ಸಕ್ಕರೆ ಕಾರ್ಖಾನೆ, 2008ರಿಂದ ಮೂರು ಸರಕಾರದಲ್ಲಿ ಒಟ್ಟು ಸೇರಿ 520 ಕೋಟಿಯಷ್ಟು ಪುನಶ್ಚೇತನಕ್ಕೆ ಹಣ ಕೊಡಲಾಗಿದೆ. ಆದರೂ 420 ಕೋಟಿ ರು. ನಷ್ಟದಲ್ಲೇ ಇದೆ, ಈಗಿನ ತಂತ್ರಜ್ಞಾನ ಬಳಸಿ ಹೊಸ ಕಾರ್ಖಾನೆ ತೆರೆಯಲು ಇಷ್ಟು ಹಣ ಬೇಕಿಲ್ಲ, ಜಾಗ ಕೊಟ್ಟರೆ ನಾನೇ ತೆರೆದು ತೋರಿಸಲು ಸಿದ್ದನಿದ್ದೇನೆ ಎಂದು ಕಾರ್ಖಾನೆ ಪುನಶ್ಚೇತನ ವ್ಯರ್ಥ ಎಂದರು.

ಎಸ್.ಆರ್. ಪಾಟೀಲ್ ಆಕ್ಷೇಪ

ಸಚಿವ ನಿರಾಣಿ ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಪ್ರತಿಪಕ್ಷ ನಾಯಕ ಎಸ್.ಆರ್ ಪಾಟೀಲ್, ಅಂದಿನ ಸಿಎಂ ಯಡಿಯೂರಪ್ಪ ಖಾಸಗಿಗೆ ಕೊಡಲ್ಲ, ಎಲ್ಲರೂ ಸೇರಿ ಸಭೆ ನಡೆಸಿ ನಿರ್ಧಾರ ಮಾಡೋಣ ಎಂದಿದ್ದರು. ಈಗ ಸಭೆ ಕರೆಯಿರಿ, ಚರ್ಚಿಸಿ ನಿರ್ಧರಿಸಿ ಎಂದು ಆಗ್ರಹಿಸಿದರು.

ಶಾಸಕರಿಗೆ ವಾರದ ನಾಲ್ಕು ಗಂಟೆ ಮೀಸಲು: ಮುಖ್ಯಮಂತ್ರಿ

- ಸಿಎಂ ಅವರಿಂದ ನೂತನ ನಿರ್ಧಾರ
- ಸಿಎಂ ಕೈಗೆ ಸಿಗುವುದಿಲ್ಲ ಎನ್ನುವ ಆರೋಪದಿಂದ ಮುಕ್ತಿಯಾಗಲು ಈ ನಿರ್ಧಾರ

ಬೆಂಗಳೂರು: ಬಿಜೆಪಿ ಶಾಸಕರಿಗೆ ಸಿಎಂ ಸಿಗುತ್ತಿಲ್ಲ ಎನ್ನುವ ಆರೋಪ ಪದೇಪದೆ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ, ಇದೀಗ ಈ ಆರೋಪದಿಂದ ಹೊರಬರಲು ವಾರಕ್ಕೆ ನಾಲ್ಕು ಗಂಟೆ ಮೀಸಲು ಇಡಲು ತೀರ್ಮಾನಿಸಿದ್ದಾರೆ.

ವಾರದಲ್ಲಿ ನಾಲ್ಕು ಗಂಟೆ ಪಕ್ಷದ ಶಾಸಕರಿಗಾಗಿ ಮೀಸಲಿಟ್ಟು ಅವರ ದೂರು-ದುಮ್ಮಾನಗಳು, ಕಷ್ಟಗಳು, ಸಮಸ್ಯೆಗಳನ್ನು ಆಲಿಸಲು ಸಿಎಂ ಬಸವರಾಜ ಬೊಮ್ಮಾಯಿ ಮುಂದಾಗಿದ್ದಾರೆ. 2019ರಲ್ಲಿ ಬಿಜೆಪಿ ಪಕ್ಷ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರಕಾರವನ್ನು ಆಪರೇಷನ್ ಕಮಲ ಮೂಲಕ ಉರುಳಿಸಿ ಅಧಿಕಾರಕ್ಕೆ ಬಂದ ಮೇಲೆ ಹಲವು ಶಾಸಕರಲ್ಲಿ ಅಸಮಾಧಾನ, ಆರೋಪಗಳು ಕೇಳಿಬರುತ್ತಲೇ ಇದ್ದವು.

ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ತಮ್ಮ ಕ್ಷೇತ್ರದ ಸಮಸ್ಯೆಗಳು, ಆಗಬೇಕಾದ ಕೆಲಸಗಳ ಬಗ್ಗೆ ಹೇಳಿಕೊಳ್ಳಲು, ಮಾತನಾಡಲು ಸಿಗುವುದಿಲ್ಲ ಎಂದು ಶಾಸಕರು ಹೇಳಿಕೊಂಡು ಬರುತ್ತಲೇ ಇದ್ದರು. ಇದಕ್ಕೆಲ್ಲಾ ಪೂರ್ಣವಿರಾಮ ಹಾಕಲು ಸಿಎಂ ಬಸವರಾಜ ಬೊಮ್ಮಾಯಿ ಈ ನಿರ್ಧಾರಕ್ಕೆ ಬಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಪ್ರತಿ ಗುರುವಾರ ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನದವರೆಗೆ ಶಾಸಕರ ಧ್ವನಿಗೆ ಕಿವಿಯಾಗುತ್ತೇನೆ ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ. ಶಾಸಕರು ತಮ್ಮ ಕ್ಷೇತ್ರ ಅಥವಾ ಪಕ್ಷಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಮಾತನಾಡಬಹುದು. ಶೀಘ್ರದಲ್ಲೇ, ಸಚಿವರು ಕೂಡ ಶಾಸಕರನ್ನು ಭೇಟಿ ಮಾಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಶಾಸಕರ ನಡುವೆ ಉತ್ತಮ ಸಮನ್ವಯವನ್ನು ಸಾಧಿಸಲು ಮತ್ತು ವಿರೋಧ ಪಕ್ಷವನ್ನು ಸಮರ್ಥವಾಗಿ ಎದುರಿಸಲು ಶಾಸಕರನ್ನು ಸಜ್ಜುಗೊಳಿಸಲು ಪಕ್ಷ ಪ್ರತಿ ಮಂಗಳವಾರ ಬೆಳಗ್ಗೆ 9.30 ರಿಂದ 11 ರ ನಡುವೆ ಶಾಸಕರ ಸಭೆಯನ್ನು ಕರೆಯಲು ನಿರ್ಧರಿಸಿದೆ.